

ತಪ್ಪಿಗಾಗಿ ಸೀಟು ಸಿಕ್ಕಲಿಲ್ಲವ್ರೋ ದರಿದ್ರದ್ದು!' ಎನ್ನುವ ಬೇಗುದಿಯೂ ಉಂಟಾಗುತ್ತದೆ. ಅದರಿಂದಾಗಿ ಉಂಟಾಗುವ ಸಿಡುಕೂ ಮತ್ತು ರೇಜಿಗೆಯೂ ಅವರ ಮುಖದಲ್ಲಿ ಎಷ್ಟು ಹಿಡಿದಿಟ್ಟರೂ ಹೊರಗೆ ಬಂದೆ ತೀರುವ ಕಂಬನಿಯಂತೆ ಪ್ರಕಟವಾಗಿಬಿಡುತ್ತದೆ. ಅದಕ್ಕೆ ತಕ್ಕಂತೆ ಕೂತವರು ಅವರ ಅಂದಿನ ಭಾಗ್ಯವ ನೆನೆದು ಸಂಭ್ರಮವಾಗಿ ಕಿಟಕಿಯ ಬದಿಗೆ ಕಾಣುವ ಅರ್ಧ ಪ್ರಪಂಚವನ್ನು, ತಣ್ಣನೆಯ ಹವೆಯನ್ನು, ಮರದ ಹಸಿರನ್ನು ದಾರಿಮಧ್ಯಬರುವ ಬೇರೆ ಊರಿನ ಜನರ ಜೀವನವನ್ನು ತಮ್ಮ ಚಕ್ಷು ಪಾತ್ರೆಯಲ್ಲಿ ತುಂಬಿಕೊಳ್ಳುತ್ತಾ ಹೋಗುತ್ತಾರೆ. ಕೆಲವರಂತೂ ಸೀಟು ಸಿಕ್ಕ ಕೂಡಲೇ ಕಣ್ಣು ಮುಚ್ಚಿ ಕನಸಿನ ಲೋಕಕ್ಕೆ ಜಾರಿಬಿಡುತ್ತಾರೆ. ತಾವು ಮಾನಸಿಕವಾಗಿ ಬೇರೆ ಲೋಕದಲ್ಲಿದ್ದರೂ ದೇಹದ ಇರುವಿಕೆಯ ತೋರ್ಪಡಿಕೆಗಾಗಿಯೇ ಎನ್ನುವ ಹಾಗೆ ಗೊರಕೆ ಹೊಡೆಯುತ್ತಾರೆ. ಭೂಗೋಳದ ಅಡ್ಡಡ್ಡ ಪ್ರಗತಿಗೆ ಸಾಧ್ಯವಾಗದ ಕಾರಣ ಉದ್ದುದ್ದ ಆಕಾಶಮುಖಿ ಪ್ರಗತಿಗೆ ಜೋತು ಬಿದ್ದಿರುವ ನಮಗೆ, ಒಂದು ಸೂಜಿಮೊನೆಯ ಜಾಗೆಯೂ ಸಿಗದಂತೆ ಆಗಿ ಬಿಟ್ಟಿರುವ ರಿಯಲ್ ಎಸ್ಟೇಟ್ ಮಾಫಿಯಾದ ದುಬಾರಿಯ ಕಾಲದಲ್ಲಿ ಸಿಕ್ಕ ಒಂದು ಹೆಜ್ಜೆ ಜಾಗದಲ್ಲಿಯೇ ಅನುಸರಿಸಿಕೊಂಡು ಜನರು ತಮ್ಮ ನಿಲ್ದಾಣ ಮುಟ್ಟುತ್ತಾರೆ.

ಧಾರವಾಡದಿಂದ ಬೆಂಗಳೂರೆಂಬ ಮಹಾನಗರಕ್ಕೆ ಬಂದು ಸೇರಿದಾಗ ನಾನು ಎದುರಿಸುತ್ತಿದ್ದ ಮೊದಲ ಸಮಸ್ಯೆಯೆಂದರೆ ಇಲ್ಲಿನ ಹಲವಾರು ಸಿಟಿ ಬಸ್ಸುಗಳ ಕಿಟಕಿಗಳು ಚಿಕ್ಕದಿದ್ದು ಬಸ್ ನಿಲ್ದಾಣದ ಹೆಸರುಗಳೇ ಕಾಣದಂತಹ ಪರಿಸ್ಥಿತಿ ಇತ್ತು ಮತ್ತು ಅದರ ಮೇಲ್ಭಾಗದಲ್ಲಿ ಯಾವುದೊ ಧಾರಾವಾಹಿಯ ಅಥವಾ ಕಾರ್ಪೊರೇಟ್ ಜಾಹೀರಾತಿನ ಸ್ಟಿಕ್ಕರುಗಳು ಅಂಟಿಕೊಂಡಿರುತ್ತಿದ್ದುದು ಕಿರಿಕಿರಿಯನ್ನುಂಟು ಮಾಡುತ್ತಿತ್ತು. ಬೆಂಗಳೂರು ನಾವೆಷ್ಟೇ ಗೊತ್ತು ಎಂದು ತಿಳಿದರೂ ಅದು ಅಗಾಧವಾಗಿ ನಿಗೂಢವಾಗಿ